ರಾಜ್ಯ ಸರಕಾರದ ವಾರ್ತಾ ಇಲಾಖೆಯ ಮಾಧ್ಯಮ ಪಟ್ಟಿಗೆ ಸೇರಿದ, ಅಂತಾರಾಷ್ಟ್ರೀಯ ಮಾನ್ಯತೆ ಪಡೆದ ಮಾಸಿಕ


ISSN 2582 - 533X ಆಗಸ್ಟ್ 2023 ₹ 15/-

# ನಿರಂತರ ಪ್ರಗತಿ

20ನೇ ವರ್ಷದ ಪ್ರಕಟಣೆಯಲ್ಲಿ


ಪಾಸಿಟಿವ್ ಪತ್ರಿಕೋದ್ಯಮದ ಹರಿಕಾರ

9 ಲಕ್ಷ ಚಂದಾದಾರರು











## ಶೌರ್ಯ

ಆಪತ್ಕಾಲದ ಆಪತ್ಬಾಂಧವರು



■ ಕವರ್ ಸ್ಟೋರಿ

# ಶೌರ್ಯ
# ಆಪತ್ಕಾಲದ ಆಪತ್ಬಾಂಧವರು

ಡಾ. ಚಂದ್ರಹಾಸ್ ಚಾರ್ಮಾಡಿ

ಉಕ್ಕಿ ಹರಿಯುವ ನೀರಿನ ಸೌಂದರ್ಯವನ್ನು ಕಣ್ತುಂಬಿಕೊಳ್ಳುತ್ತಿರುವ ಯುವಕ ಇದ್ದಕ್ಕಿದ್ದಂತೆ ಕಾಲು ಜಾರಿ ನೀರಿಗೆ ಬಿದ್ದು ಬಿಡುತ್ತಾನೆ. ಜೊತೆಗಿದ್ದ ನಾಲ್ಕು ಮಂದಿಗೂ ಈಜು ಗೊತ್ತಿಲ್ಲ. ಮುಳುಗೇಳುತ್ತಿದ್ದ ಆತನ ಕೂಗು ಕೇಳಿ ಒಂದಷ್ಟು ಮಂದಿ ಅಲ್ಲಿ ಸೇರುತ್ತಾರೆ. ಆದರೆ ಪ್ರಾಣ ರಕ್ಷಣೆಗಾಗಿ ಅಂಗಲಾಚುತ್ತಿದ್ದ ಯುವಕನನ್ನು ರಕ್ಷಿಸುವ ಪ್ರಾವೀಣ್ಯತೆ ಅಲ್ಲಿರುವವರಲ್ಲಿ ಇಲ್ಲದ ಕಾರಣ ಯುವಕ ನೀರು ಪಾಲಾಗುತ್ತಾನೆ...

ನೋಡನೋಡುತ್ತಿದ್ದಂತೆ ಪ್ರವಾಹ ಬಂದು ದನ – ಕರುಗಳು ನೀರಿನಲ್ಲಿ ತೇಲಿ ಹೋದವು. ಯಾರಾದರೊಬ್ಬನಿಗೆ ಈಜು ಗೊತ್ತಿದ್ದರೆ ಅವುಗಳನ್ನು ರಕ್ಷಿಸಬಹುದಿತ್ತು...

ಮನೆಯ ಮಾಡು ಕುಸಿದುಬಿದ್ದು ರಕ್ಷಿಸುವವರಿಲ್ಲದೆ ಮನೆಮಂದಿ ಸಮಾಧಿಯಾದದ್ದು, ಅಪಘಾತವಾದಾಗ ತಕ್ಷಣ ಆಸ್ಪತ್ರೆಗೆ ಸೇರಿಸುವವರಿಲ್ಲದೆ ರಕ್ತದ ಮಡುವಿನಲ್ಲಿ ಉಸಿರು ಚೆಲ್ಲಿದ್ದು, ಗುಡ್ಡ ಕುಸಿದು ಅದರಡಿ ಸಿಲುಕಿ ಪ್ರಾಣ ಕಳೆದುಕೊಂಡದ್ದು ಹೀಗೆ ತಕ್ಷಣ ನೆರವಿಗೆ ಬರುವವರಿಲ್ಲದೆ ಪ್ರಾಣವನ್ನು ಕಳೆದುಕೊಂಡ ಸಾವಿರಾರು ಉದಾಹರಣೆಗಳು ನಮ್ಮೆದುರಿಗಿವೆ.

ಒಂದು ಅಂಕಿಅಂಶದ ಪ್ರಕಾರ ನಮ್ಮ ದೇಶದಲ್ಲಿ ನಡೆಯುವ ಸಾವುಗಳ ಪ್ರಮಾಣದಲ್ಲಿ ಶೇ.42ರಷ್ಟು ಸಾವುಗಳು ತಕ್ಷಣ ನೆರವು ದೊರೆಯದೆ ಘಟಿಸುತ್ತಿವೆ. ನೆರೆ, ಅತಿವೃಷ್ಟಿ, ಪ್ರವಾಹ, ವಿಷಾನಿಲ ಸೋರಿಕೆ, ಭೂಕಂಪ, ಸುನಾಮಿ, ಗುಡ್ಡಕುಸಿತ, ಚಂಡಮಾರುತ ಮುಂತಾದವುಗಳು ಅಪರೂಪಕ್ಕೊಮ್ಮೆ ಬರುತ್ತವೆ. ಆದರೆ ನಿತ್ಯ ನಡೆಯುವ ಅವಘಡಗಳು ನೂರಾರು ಇವೆ. ರಸ್ತೆ ಅಪಘಾತಗಳು, ಬೆಂಕಿ ತಗಲುವಿಕೆ, ಅಡುಗೆ ಅನಿಲ ಸಿಲಿಂಡರ್ ಸ್ಫೋಟ, ಹೃದಯಾಘಾತ, ವಿದ್ಯುತ್ ಸಂಬಂಧಿತ ಅಪಘಾತಗಳು, ಕಟ್ಟಡ ಕುಸಿತ, ರೈಲು ಅಪಘಾತ ಮುಂತಾದ ದುರಂತಗಳು ಸಂಭವಿಸಿದಾಗ ತಕ್ಷಣ ಸಂತ್ರಸ್ತರಿಗೆ ನೆರವು ದೊರೆತಲ್ಲಿ ಒಂದಷ್ಟು ಮಂದಿಯನ್ನಾದರೂ ಸಾವಿನ ದವಡೆಯಿಂದ ಪಾರು ಮಾಡಬಹುದಾಗಿದೆ.

'ವಿಪತ್ತು' ಎಂಬುದು ರಾಜ್ಯದ ಯಾವ ಭಾಗವನ್ನೂ ಬಿಟ್ಟಿಲ್ಲ. ಹಿಂದೆ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಹೆಚ್ಚಾಗಿ ಸಂಭವಿಸುತ್ತಿದ್ದ ಜಲಪ್ರಳಯ 2018ರಲ್ಲಿ ಕೊಡಗಿಗೂ ಅಪ್ಪಳಿಸಿತು. ಮುಂದಿನ ವರ್ಷ ಕರಾವಳಿಯ ಕದವನ್ನು ತಟ್ಟಿತು. ದೇಶದ ಯಾವುದೇ ಭಾಗದಲ್ಲೂ ವಿಪತ್ತುಗಳು ಎದುರಾದಾಗಲೂ ಶ್ರೀ ಹೆಗ್ಗಡೆ ದಂಪತಿಗಳು ಅವರ ನೆರವಿಗೆ ನಿಲ್ಲುತ್ತಾರೆ.

“2009 – 10ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಉಂಟಾದ ಪ್ರವಾಹದಲ್ಲಿ ಮನೆ ಕಳೆದುಕೊಂಡ ಸಂತ್ರಸ್ತರಿಗೆ ಹೊಸ ಮನೆ ನಿರ್ಮಾಣ, 2018ರಲ್ಲಿ ಕೊಡಗು ಜಿಲ್ಲೆಯಲ್ಲಿ ಉಂಟಾದ ಪ್ರಾಕೃತಿಕ ದುರಂತಕ್ಕೆ ನೆರವು, 2019ರಲ್ಲಿ ರಾಜ್ಯದಲ್ಲಿ ಸಂಭವಿಸಿದ ನೆರೆಹಾನಿಗೆ ಸ್ಪಂದಿಸಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ.25 ಕೋಟಿ ನೆರವು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಬಿಜಾಪುರ, ಬಾಗಲಕೋಟೆ, ಕೊಪ್ಪಳ, ಗದಗ, ಹಾವೇರಿ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳ ಪ್ರವಾಹ ಸಂತ್ರಸ್ತರಿಗೆ ಅಕ್ಕಿ, ಬೇಳೆಕಾಳುಗಳು, ದವಸಧಾನ್ಯಗಳು, ಬಟ್ಟೆ, ಹೊದಿಕೆ, ಪಾತ್ರೆಗಳು ಸೇರಿದಂತೆ ಮೂಲಭೂತ ಅಗತ್ಯ ವಸ್ತುಗಳ ಒದಗಣೆ ಮತ್ತು ವೈಯಕ್ತಿಕ ಸಹಾಯಧನ, ಉತ್ತರ ಕರ್ನಾಟಕದ ಭಾಗಗಳಲ್ಲಿ ಬರಗಾಲದಲ್ಲಿ ಜಾನುವಾರುಗಳಿಗೆ ಮೇವು ಪೂರೈಕೆ, ಕುಡಿಯಲು ಶುದ್ಧ ನೀರು ಸರಬರಾಜು, ಯೋಜನೆಯ ಮೂಲಕ ವಿಶೇಷ ಸಾಲ ಸೌಲಭ್ಯ, ಕೋವಿಡ್ ಸಮಸ್ಯೆ ಬಂದಾಗ ಪ್ರಧಾನಮಂತ್ರಿ ಆರೈಕೆ ನಿಧಿಗೆ ರೂ.5 ಕೋಟಿ ನೆರವು, ಸರಕಾರಿ ಆಸ್ಪತ್ರೆಗಳಿಗೆ ಆಮ್ಲಜನಕ, ವೈದ್ಯಕೀಯ ಉಪಕರಣಗಳ ಪೂರೈಕೆ, ಕೇರ್‌ಸೆಂಟರ್‌ಗಳ ಸ್ಥಾಪನೆ, ಅನಾಥರಿಗೆ ಮತ್ತು ಭಿಕ್ಷುಕರಿಗೆ ಆಹಾರ ಪೂರೈಕೆ ಹೀಗೆ ಹಲವಾರು ವಿಪತ್ತಿನ ಸಂದರ್ಭದಲ್ಲಿ ಶ್ರೀ ಹೆಗ್ಗಡೆಯವರು ನೆರವು ನೀಡಿದ್ದಾರೆ.

**ದೊಡ್ಡ ಮಟ್ಟದ ವಿಪತ್ತುಗಳನ್ನು ಎದುರಿಸಲೆಂದೇ ಕೇಂದ್ರ ಮತ್ತು ರಾಜ್ಯ ಸರಕಾರದ ಪ್ರತ್ಯೇಕ ತಂಡಗಳಿವೆ. ನೆರೆ, ಜಲಪ್ರಳಯ, ಪ್ರವಾಹ, ಭೂಕಂಪ, ಸುನಾಮಿ ಮುಂತಾದ ವಿಪತ್ತುಗಳು ಸಂಭವಿಸಿದಾಗ ಜೀವದ ಹಂಗು ತೊರೆದು ಅವರು ಸಲ್ಲಿಸುವ ಸೇವೆಗೆ ಎಷ್ಟೇ ಕೃತಜ್ಞತೆ ಹೇಳಿದರೂ ಸಾಲದು. ವಿಪತ್ತಿಗೆ ನೆರವಾಗುವ ಕೆಲವೊಂದು ಇಲಾಖೆಗಳನ್ನು ಇಲ್ಲಿ ಪರಿಚಯಿಸಲಾಗಿದೆ.**

**ಅಗ್ನಿಶಾಮಕ :** ಪೊಲೀಸ್ ಆಡಳಿತ ಮತ್ತು ನಿಯಂತ್ರಣದಲ್ಲಿ 1965ರಲ್ಲಿ ಈ ಇಲಾಖೆಯನ್ನು ಆರಂಭಿಸಲಾಗಿದೆ. ಬೆಂಕಿ ಅವಘಡಗಳಾದಾಗ ಇವರು ತಕ್ಷಣ ನೆರವಿಗೆ ಬರುತ್ತಾರೆ. 101 ಸಂಖ್ಯೆಗೆ ಕರೆ ಮಾಡುವ ಮೂಲಕ ಇವರನ್ನು ಸಂಪರ್ಕಿಸಬಹುದಾಗಿದೆ.

**ಕರ್ನಾಟಕ ಪೊಲೀಸ್ ಇಲಾಖೆ :** ವಿಪತ್ತಿನ ಸಮಯದಲ್ಲಿ ನಾಗರಿಕರಿಗೆ ಮತ್ತು ಅವರ ಆಸ್ತಿಗೆ ಸುರಕ್ಷತೆ ಒದಗಿಸುವ ಕೆಲಸ, ಅಗ್ನಿಶಾಮಕ ಮತ್ತು ವೈದ್ಯಕೀಯ ತಂಡದೊಂದಿಗೆ ಸಮನ್ವಯ ಸಾಧಿಸಿ ಒಟ್ಟು ಪರಿಸ್ಥಿತಿಯನ್ನು ನಿಯಂತ್ರಿಸುವ ಕೆಲಸವನ್ನು ಪೊಲೀಸ್ ಇಲಾಖೆ ಮಾಡುತ್ತಿದೆ. ಸಂಪರ್ಕ ಸಂಖ್ಯೆ : 100.

**ಗೃಹರಕ್ಷಕದಳ :** ಗೃಹರಕ್ಷಕದಳ ಮತ್ತು ನಾಗರಿಕ ರಕ್ಷಣಾ ನಿರ್ದೇಶನಾಲಯವು ಕರ್ನಾಟಕ ಸರಕಾರದ ಗೃಹ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಡಿಜಿಪಿ ಮತ್ತು ಕಮಾಂಡೆಂಟ್ ಜನರಲ್ ಅವರು ಗೃಹರಕ್ಷಕದಳ ಮತ್ತು ಸಿವಿಲ್ ಡಿಪಾರ್ಟ್‌ಮೆಂಟ್ ಎರಡಕ್ಕೂ ಮುಖ್ಯಸ್ಥರಾಗಿರುತ್ತಾರೆ.

**ವಿಪತ್ತು ನಿರ್ವಹಣಾ ಪ್ರಾಧಿಕಾರಗಳು :** ರಾಷ್ಟ್ರ, ರಾಜ್ಯ ಹಾಗೂ ಜಿಲ್ಲೆಗಳ ಹಂತದಲ್ಲಿ ವಿಪತ್ತು ನಿರ್ವಹಣೆಯನ್ನು ಪರಿಣಾಮಕಾರಿಗೊಳಿಸಲು ವಿಕೋಪ ನಿರ್ವಹಣಾ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಮಾನವ ನಿರ್ಮಿತ ಹಾಗೂ ನೈಸರ್ಗಿಕ ವಿಕೋಪಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದು ಇದರ ಮುಖ್ಯ ಉದ್ದೇಶ. ಈ ಆದೇಶದಂತೆ ರಾಷ್ಟ್ರ ಮಟ್ಟದಲ್ಲಿ ಪ್ರಧಾನಮಂತ್ರಿಯವರ ನೇತೃತ್ವದಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಸ್ಥಳೀಯ ಅಧಿಕಾರಿಗಳ, ಚುನಾಯಿತ ಜನಪ್ರತಿನಿಧಿಗಳ ಸಹ ಅಧ್ಯಕ್ಷತೆಯಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು ರಚಿಸಲಾಗಿದೆ.

**ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ :** ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಪಂಚಾಯತ್ ಚುನಾಯಿತ ಅಧ್ಯಕ್ಷರ ಸಹ ಅಧ್ಯಕ್ಷತೆಯಲ್ಲಿ ಒಟ್ಟಾರೆ 9 ಸದಸ್ಯರನ್ನು ಒಳಗೊಂಡಿದೆ. ಜಿಲ್ಲಾ ಮಟ್ಟದ ವಿಕೋಪ ನಿರ್ವಹಣೆಗೆ ಇದು ಸಹಕಾರ ನೀಡುತ್ತದೆ.

**ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ :** 2005ರ ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಕಾಯ್ದೆಯ ಪ್ರಕಾರ ದೇಶದ ಪ್ರತಿ ರಾಜ್ಯದಲ್ಲಿ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವನ್ನು ರಚಿಸಲಾಗಿದೆ. ಇದು ರಾಜ್ಯದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸುತ್ತದೆ.

**ರಾಜ್ಯ ವಿಪತ್ತು ನಿರ್ವಹಣಾ ಪಡೆ :** ರಾಜ್ಯದಲ್ಲಿ ಸಂಭವಿಸುವ ಪ್ರಾಕೃತಿಕ ದುರಂತಗಳ ಕಾರ್ಯಾಚರಣೆಗೆ ಅನುಕೂಲವಾಗುವಂತೆ ರಾಜ್ಯಮಟ್ಟದಲ್ಲಿ 'ರಾಜ್ಯ ವಿಪತ್ತು ನಿರ್ವಹಣಾ ಪಡೆ' ಕಾರ್ಯನಿರ್ವಹಿಸುತ್ತಿರುತ್ತದೆ. ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪಡೆಯು ರಾಜ್ಯ ಪೊಲೀಸ್, ಮೀಸಲು ಪೊಲೀಸ್, ಅಗ್ನಿಶಾಮಕ ಮತ್ತು ತುರ್ತು ಸಿಬ್ಬಂದಿ ಇಲಾಖೆಯ ಸಿಬ್ಬಂದಿಗಳನ್ನು ಒಳಗೊಂಡ ಪಡೆಯಾಗಿದೆ.

**ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪಗಳ ಉಸ್ತುವಾರಿ ಕೇಂದ್ರ :** 1988ರಲ್ಲಿ ಕರ್ನಾಟಕ ರಾಜ್ಯದಲ್ಲಿ ಬರ ಅಧ್ಯಯನ ಕೈಗೊಳ್ಳಲು ಬರ ಪರಿಹಾರ ಉಸ್ತುವಾರಿ ಕೇಂದ್ರವನ್ನು ಸ್ಥಾಪಿಸಲಾಯಿತು. 2007ರ ವೇಳೆಗೆ ಬರ ಪರಿಹಾರ ಉಸ್ತುವಾರಿ ಕೇಂದ್ರವನ್ನು ಬಲಪಡಿಸಿ ಬರದೊಂದಿಗೆ ಇತರ ನೈಸರ್ಗಿಕ ವಿಕೋಪಗಳಾದ ನೆರೆ ಹಾವಳಿ, ಭೂಕಂಪನ, ಭೂಕುಸಿತ ವಿಷಯಗಳಿಗೆ ಸಂಬಂಧಿಸಿದಂತೆ ವೈಜ್ಞಾನಿಕ ಅಧ್ಯಯನ ಹಾಗೂ ಪರಿಹಾರ ಕಂಡುಕೊಳ್ಳಲು 'ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ'ವನ್ನು ಸ್ಥಾಪಿಸಲಾಯಿತು. ಈ ಕೇಂದ್ರ ರಾತ್ರಿ – ಹಗಲು ಹೀಗೆ ವರ್ಷದ 365 ದಿನಗಳಲ್ಲಿಯೂ ಕಾರ್ಯನಿರ್ವಹಿಸುತ್ತದೆ. ಈ ಕೇಂದ್ರದಲ್ಲಿ ನೈಸರ್ಗಿಕ ವಿಕೋಪ ಉಸ್ತುವಾರಿಗೆಂದು ಅತ್ಯಾಧುನಿಕ ಉಪಕರಣಗಳು, ತಂತ್ರಜ್ಞಾನ ಹಾಗೂ ತಂತ್ರಾಂಶಗಳನ್ನು ಅಳವಡಿಸಲಾಗಿದ್ದು ದೇಶದಲ್ಲೆ ಮಾದರಿಯಾಗಿದೆ.

**ರಾಜ್ಯ ತುರ್ತು ನಿಯಂತ್ರಣ ಕೊಠಡಿ :** ಕರ್ನಾಟಕ ರಾಜ್ಯ ವಿಕೋಪ ನಿಯಂತ್ರಣ ಸಚಿವಾಲಯದಲ್ಲಿ ರಾಜ್ಯ ತುರ್ತು ನಿಯಂತ್ರಣಾ ಕೊಠಡಿ ಇದೆ. ಇದು ದಿನದ 24 ಗಂಟೆಯೂ ಕೆಲಸ ಮಾಡುತ್ತದೆ. ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಹಾಯವಾಣಿ ಸಂಖ್ಯೆ 1070 ಆಗಿರುತ್ತದೆ. ಈ ನಿಯಂತ್ರಣ ಕೊಠಡಿಯು ವಿವಿಧ ಮೂಲಗಳಿಂದ ವಿಪತ್ತಿನ ಕುರಿತಾದ ಮಾಹಿತಿಯನ್ನು ಸಂಗ್ರಹಿಸುತ್ತಿರುತ್ತದೆ.

**ಒಂದು ದೇಶ ಒಂದು ಸಹಾಯವಾಣಿ :** ಪೊಲೀಸ್, ಆರೋಗ್ಯ, ಅಗ್ನಿಶಾಮಕ ಸೇರಿದಂತೆ ತುರ್ತು ಸೇವೆಗಳು ಒಂದೇ ದೂರವಾಣಿ ಸಂಖ್ಯೆಯಡಿ ದೊರೆಯುವ ನಿಟ್ಟಿನಲ್ಲಿ 112 ಸೇವೆಯನ್ನು ಆರಂಭಿಸಿದೆ. ಯಾವುದೇ ರೀತಿಯ ವಿಪತ್ತುಗಳು ಸಂಭವಿಸಿದಾಗ ಈ ಸಂಖ್ಯೆಗೆ ಕರೆ ಮಾಡಬಹುದಾಗಿದೆ.

**ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆ :** ವಿಪತ್ತು ನಿರ್ವಹಣಾ ಕಾಯ್ದೆ 2005ರ ಪ್ರಕಾರ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆ (ಎನ್.ಡಿ.ಆರ್.ಎಫ್.) ಅನ್ನು ಸ್ಥಾಪಿಸಲಾಗಿದೆ. ಗುಂಟೂರು, ವಿಶಾಖಪಟ್ಟಣಂ ಮತ್ತು ಪುಣೆಯಲ್ಲಿರುವ ಎನ್.ಡಿ.ಆರ್.ಎಫ್. ಪಡೆಗಳು ನಮ್ಮ ರಾಜ್ಯಕ್ಕೆ ಸಹಾಯ ಮಾಡುತ್ತವೆ. ಈ ಸ್ಪಂದನಾ ಪಡೆಗಳು ರಾಜ್ಯ ಸರಕಾರದೊಂದಿಗೆ ಸಂಪರ್ಕದಲ್ಲಿರುತ್ತವೆ. ಜಿಲ್ಲೆ ಮತ್ತು ರಾಜ್ಯ ಆಡಳಿತದ ಕೋರಿಕೆಯ ಮೇರೆಗೆ ಶೋಧ ಮತ್ತು ರಕ್ಷಣೆ ಕೈಗೊಳ್ಳುವ ಮುಂತಾದ ಚಟುವಟಿಕೆಗಳನ್ನು ಎನ್.ಡಿ.ಆರ್. ಎಫ್. ಮಾಡುತ್ತದೆ.

ಈ ಸಹಾಯದ ಜೊತೆಗೆ ರಾಜ್ಯದ ಯಾವುದೇ ಭಾಗದಲ್ಲಿ ವಿಪತ್ತುಗಳು ಸಂಭವಿಸಿದರೂ ತಕ್ಷಣ ಅವರ ನೆರವಿಗೆ ಬರುವ ಸ್ಥಳೀಯ ತಂಡವೊಂದರ ಅಗತ್ಯತೆಯನ್ನು ಮನಗಂಡು 2020 ಜೂನ್ 21ರಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಆರಂಭವಾದ ಕಾರ್ಯಕ್ರಮವೇ **'ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ಸೇವಾ ಕಾರ್ಯಕ್ರಮ.'**

**ಏನಿದು ಶೌರ್ಯ?**

ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಅಗತ್ಯ ಸಂದರ್ಭಗಳಲ್ಲಿ ಜನರ ಜೀವ, ಆಸ್ತಿ – ಪಾಸ್ತಿಯ ರಕ್ಷಣೆಗೆ ನೆರವಾಗುವ ಸ್ವಯಂಸೇವಕರ ತಂಡ ಇದಾಗಿದೆ. ಹೆಸರೇ ಸೂಚಿಸುವಂತೆ ಅಲ್ಲಿ ಸೇವಾಮನೋಭಾವವಿದೆ, ಪ್ರೀತಿಯಿದೆ, ತಾಳ್ಮೆಯಿದೆ. ಬದುಕು ಕಟ್ಟುವ ತುಡಿತವಿದೆ. ಸಮಾಜ ಸೇವೆಯ ಹಂಬಲವಿದೆ. ಈಗಾಗಲೇ ರಾಜ್ಯದ 13 ಜಿಲ್ಲೆಗಳ 74 ತಾಲೂಕುಗಳಲ್ಲಿ ಸುಮಾರು 9,280 ಮಂದಿ ಶೌರ್ಯ ಸ್ವಯಂಸೇವಕರು ತಮ್ಮನ್ನು ತಾವು ಸಮಾಜಸೇವೆಗಾಗಿ ಅರ್ಪಿಸಿಕೊಂಡಿದ್ದಾರೆ. ಸಾವಿನ ದವಡೆಯಲ್ಲಿದ್ದ ನೂರಾರು ಜೀವಗಳನ್ನು ಬದುಕಿಸಿದ್ದಾರೆ. ಸಾವಿರಾರು ಸಮಾಜಮುಖಿ ಕೆಲಸಗಳನ್ನು ಮಾಡಿದ್ದಾರೆ, ಮಾಡುತ್ತಿದ್ದಾರೆ. ವಿಪತ್ತುಗಳು ಎದುರಾದಾಗ ತಕ್ಷಣ ನೆರವಿಗೆ ಧಾವಿಸುವ ಈ ತಂಡ ಇದೀಗ ಮನೆಮಾತಾಗಿದೆ.

**"ರಾತ್ರಿ ಹತ್ತು ಗಂಟೆಗೆ ಜೋರಾಗಿ ಮಳೆ ಸುರಿಯಲು ಆರಂಭವಾಯಿತು. ನೋಡನೋಡುತ್ತಿದ್ದಂತೆ ಪಕ್ಕದಲ್ಲಿದ್ದ ಮಾವಿನಮರ ಮನೆಯ ಮಾಡಿಗೆ ಬಿತ್ತು. ನಾನು ಮತ್ತು ಮಕ್ಕಳು ಮನೆಯೊಳಗೆ ಬಂಧಿಯಾಗಿದ್ದೆವು. ವಿಷಯ ತಿಳಿದ 'ಶೌರ್ಯ' ಸ್ವಯಂಸೇವಕರು ಮರವನ್ನು ತೆರವುಗೊಳಿಸುವ ಕೆಲಸದಲ್ಲಿ ತೊಡಗಿದರು. ಒಂದು ವೇಳೆ ಅವರು ತಕ್ಷಣ ನೆರವಿಗೆ ಬರದಿದ್ದರೆ ಮನೆ ಸಂಪೂರ್ಣವಾಗಿ ನೆಲಸಮವಾಗಿ ಜೀವಹಾನಿಯಾಗುವ ಸಂಭವವೂ ಇತ್ತು. ಮಂಜುನಾಥ ಸ್ವಾಮಿ ನಮ್ಮನ್ನು ಬದುಕಿಸಿದರು."**

■ **ಲತಾ** ನೆಲ್ಯಾಡಿ (ಹೆಸರು ಬದಲಾಯಿಸಲಾಗಿದೆ.)

**"ಕಬ್ಬಿನ ತೋಟಕ್ಕೆ ಬೆಂಕಿ ಬಿತ್ತು. ನೋಡನೋಡುತ್ತಿದ್ದಂತೆ ಬೆಂಕಿ ಎಲ್ಲೆಡೆ ಪಸರಿಸಿಕೊಂಡಿತು. ವಿಷಯ ತಿಳಿದ ಶೌರ್ಯ ಸ್ವಯಂಸೇವಕರು ತಕ್ಷಣ ಓಡಿ ಬಂದು ಬೆಂಕಿ ನಂದಿಸುವ ಕೆಲಸದಲ್ಲಿ ತೊಡಗಿದರು. ಅವರು ಬರುತ್ತಿಲ್ಲವಾದರೆ ನನ್ನ ಐದು ಎಕರೆ ಕಬ್ಬಿನ ತೋಟ ನೆಲಸಮವಾಗುತ್ತಿತ್ತು."**

■ **ಫಕೀರಪ್ಪ** ಧಾರವಾಡ (ಹೆಸರು ಬದಲಾಯಿಸಲಾಗಿದೆ.)

**"ತಂದೆ ಕೊರೊನಾ ಸೋಂಕಿನಿಂದ ಸಾವನ್ನಪ್ಪಿದ ವಿಷಯ ತಿಳಿದಾಗ ಏನು ಮಾಡಬೇಕೆಂದೇ ತೋಚಲಿಲ್ಲ. ತಕ್ಷಣ ಶೌರ್ಯ ತಂಡದವರಿಗೆ ವಿಷಯ ತಿಳಿಸಿದೆ. ನಮ್ಮ ಮನೆಯಲ್ಲಿರುವುದು ನಾವು ಮೂರು ಮಂದಿ ಹೆಣ್ಮಕ್ಕಳು. ತಂದೆಯ ಶವವನ್ನು ನಮ್ಮ ಮನೆಯಲ್ಲೇ ದಫನ ಮಾಡಬೇಕೆಂದು ಶೌರ್ಯ ತಂಡದವರಲ್ಲಿ ಕೇಳಿಕೊಂಡಾಗ ಅವರು ಆಸ್ಪತ್ರೆಗೆ ತೆರಳಿ, ಹೆಣವನ್ನು ತಂದು, ನಮ್ಮೆದುರೆ ನಾವು ಹೇಳಿದ ಜಾಗದಲ್ಲಿ ಅಂತ್ಯಸಂಸ್ಕಾರವನ್ನು ಮಾಡಿದ್ದಾರೆ. ಈ ಉಪಕಾರವನ್ನು ನಾನೆಂದಿಗೂ ಮರೆಯಲು ಸಾಧ್ಯವಿಲ್ಲ."**

■ **ಲತಾ** ಹಾಸನ (ಹೆಸರು ಬದಲಾಯಿಸಲಾಗಿದೆ)

**"ವಿಪತ್ತನ್ನು ಸಂಪೂರ್ಣವಾಗಿ ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಸಂಭವನೀಯ ವಿಪತ್ತನ್ನು ತಗ್ಗಿಸುವ ಕೆಲಸವನ್ನು 'ಶೌರ್ಯ' ತಂಡದ ಸದಸ್ಯರು ಮಾಡುತ್ತಿದ್ದಾರೆ. ಕಷ್ಟಕಾಲದಲ್ಲಿ ಒಬ್ಬರಿಗೊಬ್ಬರು ನೆರವಾಗಬೇಕೆಂಬ ತತ್ವ ಇಲ್ಲಿ ಸಾಕಾರಗೊಂಡಿದೆ. ಪ್ರಾಕೃತಿಕ ದುರಂತಗಳು ಸಂಭವಿಸಿದಾಗ ತಾವೇನಾದರೂ ಸೇವೆ ನೀಡಬೇಕೆಂದು ಹಾತೊರೆಯುತ್ತಿದ್ದ ಕೈಗಳಿಗೆ ಅಗತ್ಯ ಉಪಕರಣಗಳೊಂದಿಗೆ ತರಬೇತಿ, ಮಾರ್ಗದರ್ಶನ ಎಲ್ಲವು ದೊರೆತಿದೆ. ಸಮಾಜಸೇವೆ ಮಾಡಬೇಕೆಂಬ ತುಡಿತ ಇರುವವರಿಗೆ ಇದೊಂದು ಉತ್ತಮ ವೇದಿಕೆಯಾಗಬಲ್ಲದು. 'ಶೌರ್ಯ' ತಂಡದ ಸ್ವಯಂಸೇವಕರು ಸಹಾಯ ಮಾಡುವುದನ್ನು ನೋಡಿ ಅವರಿಂದ ಪ್ರೇರಣೆಗೊಂಡು ತಂಡ ಸೇರುವುದಾಗಿ ಒಂದಷ್ಟು ಜನ ಪ್ರತಿನಿತ್ಯ ಜನಜಾಗೃತಿ ವೇದಿಕೆಗೆ ಕರೆ ಮಾಡುತ್ತಿರುವುದು ಈ ಕಾರ್ಯಕ್ರಮದ ಯಶಸ್ಸಿಗೆ ಹಿಡಿದ ಕನ್ನಡಿಯಾಗಿದೆ."**

■ **ಶ್ರೀ ಹೆಗ್ಗಡೆಯವರು**

**"ತಂದೆಗೆ ಅಪಘಾತವಾಗಿ ತುರ್ತು ರಕ್ತ ಬೇಕಿತ್ತು. ಶೌರ್ಯ ತಂಡದ ಸದಸ್ಯರೋರ್ವರು ತಕ್ಷಣ ರಕ್ತ ನೀಡಿದರು. ಇದರಿಂದಾಗಿ ನನ್ನ ತಂದೆಯ ಪ್ರಾಣ ಉಳಿಯಿತು."**

■ **ರಾಜೇಶ್** ಪುತ್ತೂರು (ಹೆಸರು ಬದಲಾಯಿಸಲಾಗಿದೆ.)

**"ನಮ್ಮ ಊರಿನಲ್ಲಿ ಈವರೆಗೆ ಏನೇ ಸಮಸ್ಯೆಗಳಾದರೂ ಸಹಾಯಕ್ಕೆ ಯಾರೂ ಬರುತ್ತಿಲಿಲ್ಲ. ಇದೀಗ ಶೌರ್ಯ ಸ್ವಯಂಸೇವಕರು ನೆರವಿಗೆ ಬರುತ್ತಾರೆ. ನಮ್ಮ ಆತಂಕದ ದಿನಗಳು ದೂರವಾಗಿವೆ."**

■ **ಪ್ರದೀಶ್, ಕೊಡಗು** (ಹೆಸರು ಬದಲಾಯಿಸಲಾಗಿದೆ.)

ಮೇಲಿನ ಮಾತುಗಳನ್ನು ಗಮನಿಸಿದರೆ 'ಶೌರ್ಯ' ತಂಡದ ಅಗತ್ಯತೆ, ಅನಿವಾರ್ಯತೆಯ ಅರ್ಥವಾಗುತ್ತದೆ. 'ಶೌರ್ಯ' ತಂಡ ಸೇರಬೇಕು. ಆ ಮೂಲಕ ಸಮಾಜಸೇವೆಯಲ್ಲಿ ತೊಡಗಬೇಕು

ಎಂಬ ಆಸಕ್ತಿ ನಿಮ್ಮಲ್ಲೂ ಇರಬಹುದು ಅಲ್ವಾ? ಈ ನಿಟ್ಟಿನಲ್ಲಿ 'ಶೌರ್ಯ' ತಂಡದ ಆಯ್ಕೆ, ಅಲ್ಲಿನ ಕಾರ್ಯವೈಖರಿಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

**ಯಾರು ಸೇವೆ ಸಲ್ಲಿಸಬಹುದು?**

ತಾಲೂಕಿನಲ್ಲಿ ಸಮಾಜ ಸೇವೆಯಲ್ಲಿ ಆಸಕ್ತಿಯಿರುವ, ಸೇವಾ ಮನೋಭಾವ ಉಳ್ಳ, ಬೇರೆ ಬೇರೆ ಕ್ಷೇತ್ರಗಳಲ್ಲಿ ತಜ್ಞರಾಗಿರುವ 200 ಮಂದಿ ಸ್ವಯಂಸೇವಕರನ್ನು ಆಯ್ಕೆ ಮಾಡಲಾಗುತ್ತದೆ. ತುರ್ತು ಸಂದರ್ಭದಲ್ಲಿ ತಕ್ಷಣ ಸೇವೆ ನೀಡುವ ನಿಟ್ಟಿನಲ್ಲಿ ಇವರುಗಳಲ್ಲಿ 15ರಿಂದ 30 ಮಂದಿಯನ್ನು ಸೇರಿಸಿ ಘಟಕಗಳನ್ನಾಗಿ ಮಾಡಲಾಗುತ್ತದೆ. ಈ ಘಟಕಗಳನ್ನು ನೋಡಿಕೊಳ್ಳುವ ಸಲುವಾಗಿ ಗ್ರಾಮಾಭಿವೃದ್ಧಿ ಯೋಜನೆಯ ಓರ್ವ ಸೇವಾಪ್ರತಿನಿಧಿಯನ್ನು 'ಸಂಯೋಜಕ'ರಾಗಿ ಆಯ್ಕೆ ಮಾಡಲಾಗುತ್ತದೆ. ಇವರು ವಿಪತ್ತು ನಿರ್ವಹಣಾ ವಿಭಾಗದ ಕೇಂದ್ರ ಕಚೇರಿಯೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಕೇಂದ್ರ ಕಚೇರಿಯಿಂದ ನೀಡಲಾಗುವ ಸಲಹೆ, ಮಾರ್ಗದರ್ಶನವನ್ನು ಸ್ವಯಂಸೇವಕರಿಗೆ ತಲುಪಿಸುವ ಕೆಲಸವನ್ನು ಮಾಡುತ್ತಾರೆ. ಸ್ವಯಂಸೇವಕರಲ್ಲೇ ವಿಪತ್ತು ನಿರ್ವಹಣಾ ಕೌಶಲ ಹೊಂದಿರುವ ಓರ್ವರನ್ನು ಘಟಕ ಪ್ರತಿನಿಧಿಯಾಗಿ ಆಯ್ಕೆ ಮಾಡಲಾಗುತ್ತದೆ. ಇವರು ವಿಪತ್ತು ನಿರ್ವಹಣೆಗೆ ಸ್ಪಂದಿಸುವ ಜೊತೆಗೆ ತಮ್ಮ ಘಟಕದಿಂದ ತಿಂಗಳಿಗೊಂದರಂತೆ ಸಮಾಜಮುಖಿ ಕೆಲಸವನ್ನು ಮಾಡುವಂತೆ ನೋಡಿಕೊಳ್ಳುತ್ತಾರೆ. ಇನ್ನು ಶೌರ್ಯ ಘಟಕದ ಕೆಲಸಗಳನ್ನು ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಲು ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕರು, ನಿರ್ದೇಶಕರು, ಯೋಜನಾಧಿಕಾರಿಗಳು, ಮೇಲ್ವಿಚಾರಕರು, ಮಾಸ್ಟರ್, ಕ್ಯಾಪ್ಟನ್, ಸಂಯೋಜಕರು, ಘಟಕ ಪ್ರತಿನಿಧಿಗಳನ್ನೊಳಗೊಂಡ ಕೋರ್ ಕಮಿಟಿಯನ್ನು ರಚಿಸಲಾಗಿದೆ. ಈ ಮೂಲಕ ಶೌರ್ಯ ಸ್ವಯಂಸೇವಕರಿಗೆ ಬೇಕಾದ ಎಲ್ಲ ರೀತಿಯ ಸಹಕಾರವನ್ನು ಶ್ರೀಕ್ಷೇತ್ರದಿಂದ ನೀಡಲಾಗುತ್ತಿದೆ.

**ಮಾಸ್ಟರ್ ಮತ್ತು ಕ್ಯಾಪ್ಟನ್**

ತಾಲೂಕಿನ ಎಲ್ಲ ಘಟಕಗಳನ್ನು ನೋಡಿಕೊಳ್ಳಲು ಅನುಕೂಲವಾಗುವಂತೆ ತಾಲೂಕಿನ ಸ್ವಯಂಸೇವಕರ ಪೈಕಿ ಸಾಧನೆ ಮಾಡಿದ ಓರ್ವರನ್ನು ಮಾಸ್ಟರ್ ಆಗಿ, ಓರ್ವರನ್ನು ಕ್ಯಾಪ್ಟನ್ ಆಗಿ ಆಯ್ಕೆ ಮಾಡಲಾಗುತ್ತದೆ. ಇವರು ಅಗ್ನಿಶಾಮಕ, ಪೊಲೀಸ್, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹೀಗೆ ಸರಕಾರದ ಎಲ್ಲಾ ಇಲಾಖೆಗಳು ಮತ್ತು ವಿಪತ್ತು ನಿರ್ವಹಣಾ ತಂಡಗಳೊಂದಿಗೆ ನೇರ ಸಂಪರ್ಕದಲ್ಲಿದ್ದು ಯಾವುದೇ ವಿಪತ್ತು ನಿರ್ವಹಣೆಯ ಸಂದರ್ಭದಲ್ಲಿ ಮುಂಚೂಣಿಯಲ್ಲಿ ಕೆಲಸ ಮಾಡುತ್ತಾರೆ.

**ಸ್ವಯಂಸೇವಕರಿಗೆ NDRF ನಿಂದ ತರಬೇತಿ**

ಆಯ್ಕೆಯಾದ ಎಲ್ಲ ಸ್ವಯಂಸೇವಕರಿಗೆ ವಿಪತ್ತು ನಿರ್ವಹಣೆಯ ಸಂದರ್ಭದಲ್ಲಿ ಹೇಗೆ ಕೆಲಸ ಮಾಡಬೇಕು? ಏನೆಲ್ಲ ಮುಂಜಾಗರೂಕತೆಗಳನ್ನು ವಹಿಸಬೇಕು ಎಂಬ ಬಗ್ಗೆ ಕೇಂದ್ರ ಸರಕಾರದ NDRF ತಂಡದಿಂದ, ರಾಜ್ಯ ಸರಕಾರದ ಎಸ್.ಡಿ.ಆರ್.ಎಫ್., ಅಗ್ನಿಶಾಮಕದಳ, ಪೊಲೀಸ್ ಇಲಾಖೆ, ಆರೋಗ್ಯ ಇಲಾಖೆ, ಗೃಹರಕ್ಷಕದಳ ಹೀಗೆ ವಿವಿಧ ಇಲಾಖೆಗಳ ಮೂಲಕ ಇವರಿಗೆ ತರಬೇತಿಯನ್ನು ನೀಡಲಾಗುತ್ತದೆ.

**"ನಾನಾ ಕಾರಣಗಳಿಂದ ಪರಿಸರದಲ್ಲಿ ಅಸಮತೋಲನ ಉಂಟಾಗುತ್ತಿರುವ ಇಂದಿನ ದಿನಗಳಲ್ಲಿ ಭೂಕುಸಿತ, ಪ್ರವಾಹ, ಬಿರುಗಾಳಿ ಮುಂತಾದ ಅವಘಡಗಳು ಪದೇ ಪದೇ ಘಟಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಇಂತಹ ಸಮಸ್ಯೆಗಳನ್ನು ಎದುರಿಸಲು ಸರಕಾರದ ವತಿಯಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಘಟನೆಯನ್ನು ಸ್ಥಾಪಿಸಲಾಗಿದ್ದರೂ ಪ್ರಾದೇಶಿಕವಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಸನ್ನದ್ಧ ಸ್ಥಿತಿಯಲ್ಲಿರುವ ಸ್ವಯಂಸೇವಕರು ಲಭ್ಯವಿದ್ದಲ್ಲಿ ಇಂತಹ ಸಮಸ್ಯೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಎದುರಿಸಬಹುದೆಂಬ ಪರಿಕಲ್ಪನೆಯೊಂದಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಪೂಜ್ಯರ ಮಾರ್ಗದರ್ಶನದಲ್ಲಿ ಪ್ರಾರಂಭಿಸಿರುವ ಕಾರ್ಯಕ್ರಮವೇ 'ವಿಪತ್ತು ನಿರ್ವಹಣಾ ಘಟಕ.' ಈ ಕಾರ್ಯಕ್ರಮವು ಇದೀಗ ರಾಜ್ಯಾದ್ಯಂತ ವಿಸ್ತರಿಸಿಕೊಂಡಿದ್ದು ಸ್ಥಳೀಯ ತುರ್ತು ಸಮಸ್ಯೆಗಳಿಗೆ ತತ್‌ಕ್ಷಣ ಸ್ಪಂದಿಸುವ ನಿರ್ವಹಣಾ ಘಟಕವಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಸಂತೋಷದ ವಿಷಯವಾಗಿದೆ. ಜನರಲ್ಲಿರುವ ಸಮಾಜ ಸೇವೆ ಮಾಡುವ ಪ್ರಬಲ ಇಚ್ಛೆಯನ್ನು ಈ ಕಾರ್ಯಕ್ರಮವು ಎತ್ತಿ ತೋರಿಸುತ್ತಿದೆ."**

■ ಡಾ। ಎಲ್.ಎಚ್.ಮಂಜುನಾಥ್

**ರಕ್ಷಣಾ ಉಪಕರಣಗಳು**

ತರಬೇತಿ ನೀಡುವುದಷ್ಟೇ ಅಲ್ಲದೆ ಪ್ರತಿ ತಂಡಕ್ಕೂ ವಿಪತ್ತು ನಿರ್ವಹಿಸಲು ಬೇಕಾದ ಅಗತ್ಯ ಉಪಕರಣಗಳಾದ ಲೈಫ್ ಜಾಕೆಟ್, ಲೈಫ್ ಬಾಯ್, ಅಗ್ನಿ ನಂದಕಗಳು, ಹಗ್ಗಗಳು, ಚೈನ್ ಸಾ, ಪ್ರಥಮ ಚಿಕಿತ್ಸಾ ಕಿಟ್, ನಾನ್ ಸ್ಕಿಡ್ ಬೂಟ್ಸ್, ಸೇಫ್ಟಿ ಹೆಲ್ಮೆಟ್, ಹ್ಯಾಂಡ್ ಗ್ಲೌಸ್ ಪರಿಕರಗಳನ್ನು ನೀಡಲಾಗಿದೆ. ಇದಕ್ಕಾಗಿ ಈಗಾಗಲೇ ಕ್ಷೇತ್ರದಿಂದ ರೂ. 1.12 ಕೋಟಿ ಮೊತ್ತವನ್ನು ವ್ಯಯಿಸಲಾಗಿದೆ.


### ತಜ್ಞರ ತಂಡ ಸೇವೆಗೆ ಲಭ್ಯ

ಶೌರ್ಯ ತಂಡದ ಸ್ವಯಂಸೇವಕರು ತಾಲೂಕಿನಲ್ಲಿ ಯಾವುದೇ ವಿಪತ್ತುಗಳು ಎದುರಾದರೂ ತಕ್ಷಣ ಅಲ್ಲಿಗೆ ತಲುಪುತ್ತಾರೆ. ಈಜುಪಟುಗಳು, ಮುಳುಗು ತಜ್ಞರು, ಉರಗ ತಜ್ಞರು, ದೋಣಿ ಚಾಲಕರು, ವಾಹನ ಚಾಲಕರು, ಮರ ಏರುವ ತಜ್ಞರು, ಪ್ರಾಥಮಿಕ ಚಿಕಿತ್ಸಾ ಪರಿಣತರು ಹೀಗೆ ಬೇರೆ ಬೇರೆ ಕೆಲಸಗಳಲ್ಲಿ ಅನುಭವ ಹೊಂದಿದ, ಪರಿಣತಿಯನ್ನು ಪಡೆದಿರುವವರ ತಂಡ ಇದಾಗಿದೆ.

### ಶೌರ್ಯ ಸ್ವಯಂಸೇವಕರು ಹೇಗೆ ಕೆಲಸ ಮಾಡುತ್ತಾರೆ?

ವಿಪತ್ತು ಸಂಭವಿಸಿದಾಗ ತಕ್ಷಣ ಅವರ ರಕ್ಷಣೆಗೆ ಧಾವಿಸುವ ಕೆಲಸವನ್ನು ಇವರು ಮಾಡುತ್ತಾರೆ. ಸರಕಾರ ಮತ್ತು ಜನ ಸಮುದಾಯದ ನಡುವೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುತ್ತಾರೆ. ಪ್ರಾಕೃತಿಕ ವಿಕೋಪಗಳ ಕುರಿತು ಮಾಹಿತಿಯನ್ನು ನೀಡುವುದು, ಅಗತ್ಯವಿದ್ದಲ್ಲಿ ಜನರ ಸ್ಥಳಾಂತರ, ರಸ್ತೆ ಅಪಘಾತ, ಗ್ಯಾಸ್ ಸಿಲಿಂಡರ್ ಸ್ಫೋಟ, ಗುಡ್ಡ, ಮನೆ ಕುಸಿತವಾದಾಗ, ಬಿರುಗಾಳಿ, ಪ್ರವಾಹ ಮುಂತಾದ ಸಂದರ್ಭದಲ್ಲಿ ಎಲ್ಲ ರೀತಿಯ ನೆರವಿಗೆ ಇವರು ಸಿದ್ಧರಿರುತ್ತಾರೆ. ಕೊರೊನಾ ಎಂಬ ಸಾಂಕ್ರಾಮಿಕ ಸೋಂಕು ರಾಜ್ಯಕ್ಕೆ ಬಂದಾಗ ಸೋಂಕಿತರನ್ನು ಆಸ್ಪತ್ರೆಗೆ ದಾಖಲಿಸುವುದರಿಂದ ಹಿಡಿದು ಹೆಣವನ್ನು ಸುಡುವ ಕೆಲಸವನ್ನು ಕೂಡಾ ಇವರು ಮಾಡಿ ಮುಗಿಸಿದ್ದಾರೆ.

ಶೌರ್ಯ ಸ್ವಯಂಸೇವಕರು ವಿಪತ್ತಿನ ಕಾಲದಲ್ಲಿ ಮಾತ್ರವಲ್ಲ ಇತರ ಸಂದರ್ಭಗಳಲ್ಲೂ ಸ್ವಚ್ಛತೆ, ಶಾಲಾ ಮೈದಾನಗಳ ರಚನೆ, ಕಾಲುಸಂಕಗಳ ರಚನೆ, ರಸ್ತೆ ರಿಪೇರಿ, ಮನೆ ರಿಪೇರಿ, ರಸ್ತೆ ಅಪಘಾತಗಳಿಗೆ ಸ್ಪಂದನೆ, ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವುದು ಹೀಗೆ ಒಂದಲ್ಲೊಂದು ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಯಾವುದೇ ಅವಘಡ ಸಂಭವಿಸಿದಾಗ ತಕ್ಷಣ ಎನ್.ಡಿ.ಆರ್.ಎಫ್. ತಂಡಕ್ಕೆ ತಿಳಿಸುವ ಜೊತೆಗೆ ಅವರು ಬರುವ ಮುಂಚೆ ತಮ್ಮ ತಂಡದಿಂದ ಆಗಬಹುದಾದ ಕೆಲಸವನ್ನು ಮಾಡುವ ಮೂಲಕ ಪ್ರಾಣ, ಆಸ್ತಿಯ ರಕ್ಷಣೆಯಲ್ಲಿ ಸಾಥ್ ನೀಡುತ್ತಿದ್ದಾರೆ.



**"ಸ್ಥಳೀಯವಾಗಿ ಸಂಭವಿಸುವ ವಿಪತ್ತುಗಳಿಂದ ಉಂಟಾಗುವ ಆಪತ್ತುಗಳನ್ನು ಆದಷ್ಟು ಮಟ್ಟಿಗೆ ತಗ್ಗಿಸುವಂತಹ ವಿಶಿಷ್ಟ ಕಾರ್ಯಕ್ರಮಕ್ಕೆ ಪೂಜ್ಯರು 'ಶೌರ್ಯ' ಎಂದು ಹೆಸರಿಟ್ಟು ಚಾಲನೆಯಿತ್ತರು. ಜನರ ಸೇವೆಯ ತುಡಿತ ಹೊಂದಿರುವ ಸ್ವಯಂಸೇವಕರ ಅತ್ಯುತ್ತಮವಾದ ತಂಡಗಳು ಇಂದು ಕರ್ನಾಟಕ ರಾಜ್ಯದ 74 ತಾಲೂಕುಗಳಲ್ಲಿ ಅದ್ವಿತೀಯ ವಿಪತ್ತು ಸೇವೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಶೌರ್ಯ ಸೇನಾನಿಗಳ ಶೌರ್ಯಕ್ಕೊಂದು ದೊಡ್ಡ ಸಲಾಂ"**

■ ಅನಿಲ್ ಕುಮಾರ್ ಎಸ್.ಎಸ್.

### ರಾಜ್ಯ ತುರ್ತು ಸ್ಪಂದನಾ ತಂಡ

**ರಾಜ್ಯವಲ್ಲದೇ ಹೊರ ರಾಜ್ಯಗಳಲ್ಲೂ ವಿಪತ್ತು ಸಂಭವಿಸಿದಾಗ ಅಲ್ಲಿಗೆ ತೆರಳಿ ನೆರವಿಗೆ ಧಾವಿಸಲು ಕೌಶಲ ಹೊಂದಿರುವ ವಿಶೇಷ ತರಬೇತಿ ಪಡೆದ 12 ಪರಿಣತ ಶೌರ್ಯ ಸ್ವಯಂಸೇವಕರ ತಂಡವು ಸಿದ್ಧವಾಗಿದೆ.**

### ಶೌರ್ಯ ತಂಡದ ಸ್ಪಂದನೆ

ಕಳೆದ ಮೂರು ವರ್ಷಗಳಿಂದ ಶೌರ್ಯ ತಂಡದ ಸದಸ್ಯರು ಮಾಡಿದ ಸಮಾಜ ಸೇವೆಯ ಪಟ್ಟಿ ಬಹುದೊಡ್ಡದು. 14,860 ಪ್ರವಾಹ ಕಾರ್ಯಾಚರಣೆ, 1,148 ಕಡೆಗಳಲ್ಲಿ ಬೆಂಕಿ ಅವಘಡಗಳಾದಾಗ ಅವರಿಗೆ ನೆರವು, 814 ಕಡೆ ಗುಡ್ಡ ಕುಸಿತ ತೆರವು, 47 ಸಿಲಿಂಡರ್ ಸ್ಫೋಟದಂತಹ ಘಟನೆಗಳು ನಡೆದಾಗ ನೆರವು, 9,870 ರಸ್ತೆ ಅಪಘಾತಗಳಿಗೆ ಸ್ಪಂದನೆ ಇದರೊಂದಿಗೆ 380 ವಿಪತ್ತುಗಳಿಗೆ ನೆರವು ನೀಡಲು ಎನ್.ಡಿ.ಆರ್.ಎಫ್., ಎಸ್.ಡಿ.ಆರ್.ಎಫ್. ಸಿಬ್ಬಂದಿಗಳೊಂದಿಗೆ ಕೈಜೋಡಿಸುವಿಕೆ, 1,573 ಬಾರಿ ಅಗ್ನಿಶಾಮಕ ಅಧಿಕಾರಿಗಳೊಂದಿಗೆ ಕಾರ್ಯಾಚರಣೆಯಲ್ಲಿ ಪಾಲ್ಗೊಳ್ಳುವಿಕೆ, 763 ಘಟನೆಗಳಲ್ಲಿ ಪೊಲೀಸ್ ಅಧಿಕಾರಿಗಳೊಂದಿಗೆ ಸಹಕಾರ, 3,870 ವೈಯಕ್ತಿಕ ರಕ್ತದಾನ, 29 ಕಡೆ ಇನ್ನೊಂದು ತಾಲೂಕು ಅಥವಾ ಜಿಲ್ಲೆಗಳಲ್ಲಿ ವಿಪತ್ತು ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿರುವುದು, ತೀವ್ರ ಕುಸಿತವಾದ 8,760 ಮನೆಗಳಲ್ಲಿ ಅಗತ್ಯ ಸ್ವಚ್ಛತಾ ಕಾರ್ಯದಲ್ಲಿ ಸಹಕಾರ ನೀಡಿರುವುದು, 878 ಬಾವಿ, ಕೆರೆ, ನದಿಯಲ್ಲಿ ಮರಣ ಹೊಂದಿದ ವ್ಯಕ್ತಿ, ಪ್ರಾಣಿಗಳನ್ನು ತೆರವುಗೊಳಿಸುವ ಕಾರ್ಯಾಚರಣೆ, 2,615 ಕೆಲಸಗಳ ಮೂಲಕ ಕಿಂಡಿ ಅಣೆಕಟ್ಟು/ಸೇತುವೆಗೆ ಸಿಲುಕಿದ ಮರಮಟ್ಟುಗಳ, ರಸ್ತೆಯಲ್ಲಿ ಬಿದ್ದಿರುವ 7,720 ಮರಗಳನ್ನು, ವಿದ್ಯುತ್ ತಂತಿಯ ಮೇಲೆ ಬಿದ್ದ

139 ಮರಗಳ ತೆರವು, ಕಾಡುಪ್ರಾಣಿಗಳ ಹಾವಳಿ ತಡೆಯುವ ಕುರಿತು 176 ಚಟುವಟಿಕೆ, 4,196 ಮಂದಿಗೆ ಪ್ರಥಮ ಚಿಕಿತ್ಸೆ ನೀಡಿರುವುದು, 1,380 ಬಡಕುಟುಂಬಗಳಿಗೆ ಮನೆ ರಚನೆ – ರಿಪೇರಿಯಂತಹ ಶ್ರಮದಾನದ ಕೆಲಸಗಳು, 637 ಸಾರ್ವಜನಿಕ ಕಟ್ಟಡ ರಚನೆಗೆ ಶ್ರಮದಾನ, ಕಾಲು ಸಂಕಗಳ ರಚನೆ – 142, ರಸ್ತೆ ರಿಪೇರಿ ಮತ್ತು ರಚನೆ ಶ್ರಮದಾನ – 2,816, ಮರಣ ಹೊಂದಿದ ಪ್ರಾಣಿಗಳನ್ನು ತೆರವುಗೊಳಿಸಿ ದಫನ ಮಾಡಿರುವುದು – 3,201, ಕುಡಿಯುವ ನೀರಿನ ಬಾವಿ ರಚನೆ ಮತ್ತು ಸ್ವಚ್ಛತಾ ಕಾರ್ಯಕ್ರಮ – 817, ಬಡ ಕುಟುಂಬಕ್ಕೆ ಮನೆ/ಶೌಚಾಲಯ ರಚನೆ, ರಿಪೇರಿ – 934, ಹಾವು ಹಿಡಿದು ಕಾಡಿಗೆ ಬಿಟ್ಟಿರುವುದು – 2,159, ಅನಾರೋಗ್ಯ ಪೀಡಿತರಿಗೆ ತುರ್ತಾಗಿ ಆಸ್ಪತ್ರೆಗೆ ಕರೆದೊಯ್ಯಲು ಸಹಕರಿಸುವುದು – 3,316, ನಿರ್ಗತಿಕರ/ಅನಾಥರ ಶವ ಸಂಸ್ಕಾರದಲ್ಲಿ ಪಾಲ್ಗೊಂಡಿರುವುದು – 618, ಕೋವಿಡ್ ಕೇರ್ ಸೆಂಟರ್‌ನಲ್ಲಿ ಸೇವೆ ಸಲ್ಲಿಸಿರುವುದು, ಇದಲ್ಲದೆ ಗಿಡನಾಟಿ, ಸ್ವಚ್ಛತಾ ಕಾರ್ಯಗಳು, ತೊಂದರೆಯಲ್ಲಿರುವ ಜಾನುವಾರುಗಳಿಗೆ ಚಿಕಿತ್ಸೆ, ರಸ್ತೆ ಬದಿಯಲ್ಲಿನ ಪೊದೆ, ಮುಳ್ಳುಕಂಟಿಗಳನ್ನು ತೆರವುಗೊಳಿಸುವುದು, ಜಾನುವಾರುಗಳಿಗೆ ಕುಡಿಯುವ ನೀರು/ ಮೇವು ವ್ಯವಸ್ಥೆ, ರಕ್ತದಾನ ಶಿಬಿರ ಏರ್ಪಡಿಸುವುದು, ಕೋವಿಡ್ ಮತ್ತಿತರ ಸಾಂಕ್ರಾಮಿಕ ರೋಗಗಳ ಲಸಿಕೆಗಳನ್ನು ಪಡೆಯಲು ಸಹಾಯ ಮಾಡಿರುವುದು, ಬರಗಾಲದಲ್ಲಿ ಕುಡಿಯುವ ನೀರು ಒದಗಣೆ, ನಿರಾಶ್ರಿತರ ಕೇಂದ್ರ /ಸಂತ್ರಸ್ತರ ಕೇಂದ್ರಗಳಿಗೆ ಭೇಟಿ ನೀಡಿ ಸಾಂತ್ವನ ಹೇಳುವುದು ಮತ್ತು ಅಗತ್ಯ ಸೇವಾ ಕಾರ್ಯದಲ್ಲಿ ತೊಡಗಿಕೊಳ್ಳುವುದು, ಗ್ರಾಮಸಭೆಯಲ್ಲಿ ಪಾಲ್ಗೊಂಡು ವಿಪತ್ತು ನಿರ್ವಹಣೆಯ ಕುರಿತು ಮಾಹಿತಿ ನೀಡುವುದು, ವಿವಿಧ ಇಲಾಖೆಗಳ ಸೌಹಾರ್ದ ಸಭೆ ಅಥವಾ ಇತರೇ ಸಭೆಗಳಲ್ಲಿ ಭಾಗಿಯಾಗಿ ವಿಪತ್ತು ನಿರ್ವಹಣೆ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡುವುದು, ಇಲಾಖೆಯ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆಸಿ ಇಲಾಖಾ ಸೌಲಭ್ಯಗಳ ಬಗ್ಗೆ ಮಾಹಿತಿ ಕೊಡಿಸುವುದು, ಜಲಾನಯನ ಕಾರ್ಯಕ್ರಮಗಳ ಅನುಷ್ಠಾನ, ಜನಪ್ರತಿನಿಧಿಗಳನ್ನು ಹಾಗೂ ಸರಕಾರಿ ಇಲಾಖೆಯ ಅಧಿಕಾರಿಗಳನ್ನು ಗ್ರಾಮಕ್ಕೆ ಕರೆಯಿಸಿ ಸಮಸ್ಯೆಯ ಬಗ್ಗೆ ಗಮನ ಸೆಳೆಯುವುದು, ಮದ್ಯಪಾನಿಯನ್ನು ಮದ್ಯವರ್ಜನ ಶಿಬಿರಕ್ಕೆ ಸೇರಿಸುವುದು, ಶಾಲೆ – ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕರಿಗೆ ಅಗ್ನಿಶಾಮಕ ದಳದಿಂದ ವಿಪತ್ತು ನಿರ್ವಹಣೆ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮ ಏರ್ಪಡಿಸುವುದು, ತುರ್ತು ಸಹಾಯವಾಣಿಗೆ ಕರೆ ಮಾಡಿ ತೊಂದರೆಯಲ್ಲಿರುವವರಿಗೆ ಸ್ಪಂದನೆ, ವಿಶೇಷ ದಿನಾಚರಣೆಗಳ ಆಚರಣೆ, ವಿಪತ್ತಿನ ಸಮಸ್ಯೆಗಳಿರುವ ರೈತರಿಗೆ ಸ್ಪಂದಿಸುವುದು, ದಾನಿಗಳ ಸಹಕಾರ ಪಡೆದು ಸಂತ್ರಸ್ತರಿಗೆ ಆಹಾರ ಧಾನ್ಯ ಮತ್ತಿತರ ಕಿಟ್‌ಗಳ ವಿತರಣೆ ಹೀಗೆ ಈವರೆಗೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಶೌರ್ಯ ತಂಡ ಮಾಡಿದ ಸಮಾಜಮುಖಿ ಕೆಲಸಗಳ ಪಟ್ಟಿ ಬಹುದೊಡ್ಡದಿದೆ.

## ಆಪತ್ಕಾಲದ ಆಪ್ತರಕ್ಷಕರು

'ಶೌರ್ಯ' ಗ್ರಾಮಾಭಿವೃದ್ಧಿ ಯೋಜನೆಯ ವಿನೂತನ ಮತ್ತು ಸಮಾಜಕ್ಕೆ ಬೇಕಾಗುವ ಒಂದು ಅನಿವಾರ್ಯ ಕಾರ್ಯಕ್ರಮ. ದೊಡ್ಡ ಪ್ರಮಾಣದ ವಿಪತ್ತನ್ನು ನಿಭಾಯಿಸುವ ಕೆಲಸವನ್ನು ಎನ್.ಡಿ.ಆರ್.ಎಫ್., ಎಸ್.ಡಿ.ಆರ್.ಎಫ್. ಅಥವಾ ಅಗ್ನಿಶಾಮಕ ದಳ, ತುರ್ತು ಸೇವೆಗಳವರು ಬಂದು ಮಾಡುತ್ತಾರೆ. ಆದರೆ ವಿಪತ್ತು ಎನ್ನುವುದು ವಿಶೇಷವಾಗಿ ಸಣ್ಣ ಪ್ರಮಾಣದಲ್ಲಿರುತ್ತದೆ. ಆ ಸಮಯದಲ್ಲಿ ಯಾರೂ ಬರುವುದಿಲ್ಲ. ಅಂತಹ ಸಮಯದಲ್ಲಿ ಅಲ್ಲಿಯೇ ಪರಿಣತಿ ಪಡೆದಂತಹ ಸ್ಥಳೀಯ ಯುವಕ – ಯುವತಿಯರಿದ್ದಾಗ ಸಣ್ಣಮಟ್ಟ ವಿಪತ್ತುಗಳನ್ನು ನಿರ್ವಹಣೆ ಮಾಡಲು ಸಾಧ್ಯವಿದೆ. ಮತ್ತು ಎನ್.ಡಿ.ಆರ್.ಎಫ್., ಎಸ್.ಡಿ.ಆರ್.ಎಫ್.ನವರು ಇಲ್ಲಿಗೆ ಬಂದಾಗ ಅವರಿಗೆ ಇಲ್ಲಿಯ ಸ್ಥಳ, ಪರಿಸರ, ಪರಿಸ್ಥಿತಿ, ಭಾಷೆಯೂ ಗೊತ್ತಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಸ್ಥಳೀಯರು ಅವರಿಗೆ ನೆರವಾಗಲು ಅನುಕೂಲವಾಗುವ ತಂಡವಿದು. ಪೊಲೀಸ್ ಇಲಾಖೆ, ಅಗ್ನಿಶಾಮಕದಳದ ತಾಲೂಕಿಗೆ ಒಂದು ಠಾಣೆ ಇರುತ್ತದೆ. ತಾಲೂಕಿನಲ್ಲಿ ಎಷ್ಟೋ ಲಕ್ಷ ಜನಸಂಖ್ಯೆ ಇರುತ್ತದೆ. ಅಲ್ಲಿ 5ರಿಂದ 10 ಪೊಲೀಸರು ಸಾಕಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಜನರ ಭಾಗವಹಿಸುವಿಕೆಯಿಂದ ಯಾವ ಕೆಲಸವನ್ನೂ ಮಾಡಿಸಬಹುದು. ಒಳ್ಳೆಯ ಕೆಲಸವನ್ನು ಮಾಡಬೇಕಾದರೆ ಜನರ ಸಹಭಾಗಿತ್ವ ಬೇಕು. ಈಗ ಉತ್ತಮ ಮನೋಧರ್ಮದ ಯುವಕ – ಯುವತಿಯರು ನಮ್ಮ ಸಮಾಜದಲ್ಲಿದ್ದಾರೆ. ಅವರು ಇಂತಹ ಸೇವೆಗೆ ಮುಂದೆ ಬರುತ್ತಿದ್ದಾರೆ. ರಾಜ್ಯದಲ್ಲಿ ಇಷ್ಟು ಮಂದಿ ಮುಂದೆ ಬರಲು ಕಾರಣ ಸೇವಾ ಮನೋಭಾವ. ಹೀಗಾಗಿ ಶೌರ್ಯ ಆಪತ್ಕಾಲದ ಆಪ್ತರಕ್ಷಕರು ಎಂದು ಹೇಳುವುದಕ್ಕಿಂತಲೂ ಕಷ್ಟಕಾಲದಲ್ಲಿ ಬರುವ ಸಮಸ್ಯೆಗಳಿಗೆ ನೆರವಿನ ಹಸ್ತ ಚಾಚುವ ಸಹೃದಯಿ ಸಹೋದರ – ಸಹೋದರಿಯರ, ಯುವಕ – ಯುವತಿಯರ ತಂಡವಾಗಿದೆ.

■ **ವಿವೇಕ್ ವಿನ್ಸೆಂಟ್ ಪಾಯಸ್**
ಪ್ರಾದೇಶಿಕ ನಿರ್ದೇಶಕರು ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ

## ಪರಿಸರ ಬೆಳೆಸುವ ಪ್ರಯತ್ನ

ಶ್ರೀ ಹೆಗ್ಗಡೆಯವರ ಕಲ್ಪನೆಯಂತೆ ಕಾಡುಪ್ರಾಣಿಗಳಿಗಾಗಿ ಕಾಡಿನಲ್ಲಿ ಹಣ್ಣು ಬೆಳೆಸುವ ಪ್ರಯತ್ನವಾಗಿ ಮತ್ತು ಸಾಮಾಜಿಕ ಅರಣ್ಯೀಕರಣ ಕಾರ್ಯಕ್ರಮದಡಿ ಸುಮಾರು 13 ಲಕ್ಷ ಗಿಡಗಳನ್ನು ನೆಡುವ ಮೂಲಕ ಪರಿಸರ ಬೆಳೆಸುವ ಅಭಿಯಾನವೊಂದನ್ನು ಆರಂಭಿಸಿದ್ದಾರೆ.

ಶ್ರೀ ಹೆಗ್ಗಡೆ ದಂಪತಿಗಳು ಕಳೆದ ಮೂರು ವರ್ಷಗಳ ಹಿಂದೆ ಬಿತ್ತಿದ 'ಶೌರ್ಯ' ಎಂಬ ಬೀಜ ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ. ಇದೀಗ ರಾಜ್ಯದ ಎಲ್ಲ ತಾಲೂಕುಗಳಿಂದ ಶೌರ್ಯ ತಂಡವನ್ನು ರಚಿಸುವಂತೆ ಕೋರಿಕೆಗಳು ಬರುತ್ತಿರುವುದು ಈ ಕಾರ್ಯಕ್ರಮದ ಹೆಗ್ಗಳಿಕೆ. ನಿಮ್ಮ ಊರಿನಲ್ಲಿರುವ ಶೌರ್ಯ ತಂಡದ ಸದಸ್ಯರನ್ನು ಗೌರವಿಸಿ, ಅವರಿಗೆ ಬೇಕಾದ ಸಹಕಾರವನ್ನು ನೀಡಿರಿ. ವಿಪತ್ತುಗಳು ಸಂಭವಿಸಿದಾಗ ಅವರು ನಿಮ್ಮ ನೆರವಿಗೆ ಧಾವಿಸುತ್ತಾರೆ. **ಸಂಪರ್ಕಕ್ಕೆ ದೂರವಾಣಿ ಸಂಖ್ಯೆ : 9972272756.**

End